46



**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಮರಿತಿಬ್ಬೇಗೌಡ ರವರು ನಿಯಮ 72 ರಡಿ ಪ್ರಸ್ತಾಪಿಸಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ:**

**ವಿಷಯ:** ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 1980, 1984, 1985, 1986, 1987, 1991,1997ರಲ್ಲಿ ಸುಮಾರು 165 ವೈದ್ಯಾಧಿಕಾರಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳಲ್ಲಿ ಸರ್ಕಾರಿ ಕಲಸಕ್ಕೆ ಆಯ್ಕೆ ಹೊಂದಿದ್ದು, ತದನಂತರ ವೈದ್ಯಕೀಯ ವಿದ್ಯಾಲಯಗಳಲ್ಲಿ ನಿಯೋಜನೆ ಮೇಲೆ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಫೆಬ್ರುವರಿ-2009ರಲ್ಲಿ ಸದರಿ ವೈದ್ಯಾಧಿಕಾರಿಗಳನ್ನು ಸರ್ಕಾರವು ಸಾರ್ವಜನಿಕ ಹಿತಾಸಕ್ತಿಯಿಂದ ವೈದ್ಯಕೀಯ ಕಾಲೇಜುಗಳಲ್ಲಿ ಎಂ.ಸಿ.ಐ. ಅವಶ್ಯಕತೆಗಳಿಗಾನುಸಾರವಾಗಿ ವಿಲೀನ ಮಾಡಿರುತ್ತದೆ. ಸದರಿಯವರು 2006ಕ್ಕೆ ಮೊದಲೆ ಸರ್ಕಾರಿ ಸೇವೆಗೆ ಸೇರಿದವರಾಗಿರುತ್ತಾರೆ. ಸರ್ಕಾರಿ ಸ್ವಾಯತ್ತ ಸಂಸ್ಥೆಗಳಲ್ಲಿದ್ದ ಬೋಧಕ ಸಿಬ್ಬಂದಿಗಳನ್ನು ಏಕಾಏಕಿ ಅವೈಜ್ಞಾನಿಕವಾಗಿ ವೈದ್ಯಕೀಯ ಶಿಕ್ಷಣ ಸೇವಾಧಿಕಾರಿಗಳು ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವಾ ಮತ್ತು ಕಾರ್ಮಿಕ ವಿಮಾ ಯೋಜನೆ (ವೈ) ಸೇವಾ ಅಧಿಕಾರಿಗಳು ಎಂದು ಇಬ್ಭಾಗ ಮಾಡಿರುವುರಿಂದ ಸದರಿಯವರ ಪಿಂಚಣಿ ಮತ್ತು ಪ್ರೋರೇಟಾ ಎಂದು ವಿಭಾಗಿಸಿರುವುದರಿಂದ ಹಳೆ ಪಿಂಚಣಿ ಮತ್ತು ಮತ್ತಿತರೆ ಸವಲತ್ತುಗಳಿಗೆ ತುಂಬಾ ತೊಂದರೆ ಉಂಟಾಗಿರುತ್ತದೆ. ಸರ್ಕಾರಿ ವೈದ್ಯಕೀಯ ಕಾಲೇಜುಗಳಲ್ಲಿ ನೇಮಕಗೊಂಡು, ತದನಂತರ ಸದರಿ ಸರ್ಕಾರಿ ಸಂಸ್ಥೆಗಳು ಸ್ವಾಯತ್ತ ಸಂಸ್ಥೆಗಳಾದ ಮೇಲೆ ವಿಲೀನಾತಿಗೊಂಡದವರಿಗೆ ಹಳೆ ಪಿಂಚಣಿ ಸೌಲಭ್ಯ ಕಲ್ಪಿಸಲಾಗಿದೆ. ಆದರೆ, ಮೇಲ್ಕಂಡ 165 ವೈದ್ಯಾಧಿಕಾರಿಗಳಿಗೆ ಹಳೆ ಪಿಂಚಣಿ ಸೌಲಭ್ಯ ಕಲ್ಪಿಸದೆ ಇರುವುದರಿಂದ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಪ್ರಸ್ತಾಪಿಸಿರುತ್ತಾರೆ.

**ಉತ್ತರ:-**

ಈ ಮೊದಲು, ವೈದ್ಯಕೀಯ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ನಿರ್ವಹಿಸಲಾಗುತ್ತಿತ್ತು. ತದನಂತರ, ವೈದ್ಯಕೀಯ ಶಿಕ್ಷಣ ಕ್ಷೇತ್ರದಲ್ಲಿ ಗಣನೀಯ ಪ್ರಗತಿ ಉಂಟಾಗಿ, ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ವೈದ್ಯಕೀಯ ಕಾಲೇಜುಗಳನ್ನು ಸ್ಥಾಪಿಸಲಾಗಿದ್ದು, ಇವುಗಳ ನಿಯಂತ್ರಣ ಹಾಗೂ ಇತರೆ ವಿಷಯಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕವಾದ ಒಂದು ಇಲಾಖೆಯ ಅಗತ್ಯತೆಯನ್ನು ಮನಗಂಡು, ಸರ್ಕಾರವು ಆದೇಶ ಸಂಖ್ಯೆ: ಆಕುಕ 78 ಎಂಪಿಸ್ ಡಿ 78, ದಿನಾಂಕ: 18ನೇ ನವೆಂಬರ್ , 1978ರಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯನ್ನು ಪ್ರಾರಂಭಿಸಲಾಯಿತು.

ಮುಂದುವರೆದು, ಸಚಿವಾಲಯದ ಹಂತದಲ್ಲೂ ಸಹ ವೈದ್ಯಕೀಯ ಶಿಕ್ಷಣ ಸಚಿವಾಲಯವನ್ನು ಸ್ಥಾಪಿಸಲಾಯಿತು. ಮೊದಲಿಗೆ, ಅಸ್ತಿತ್ವದಲ್ಲಿದ್ದ ಬೆಂಗಳೂರು ವೈದ್ಯಕೀಯ ಕಾಲೇಜು, ಮೈಸೂರು ವೈದ್ಯಕೀಯ ಕಾಲೇಜು, ವಿಜಯನಗರ ವೈದ್ಯಕೀಯ ಕಾಲೇಜು, ಹುಬ್ಬಳ್ಳಿಯ ಕರ್ನಾಟಕ ವೈದ್ಯಕೀಯ ಕಾಲೇಜು ಹಾಗೂ ಬೆಂಗಳೂರಿನ ಸರ್ಕಾರಿ ದಂತ ವೈದ್ಯಕೀಯ ಕಾಲೇಜುಗಳನ್ನು (ಜಯದೇವ, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯನ್ನು ಒಳಗೊಂಡಂತೆ) ವೈದ್ಯಕೀಯ ಶಿಕ್ಷಣ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ತರಲಾಯಿತು. ಸದರಿ ಸಂಸ್ಥೆಗಳು 2007-08ನೇ ಸಾಲಿನಲ್ಲಿ ಸ್ವಾಯತ್ತ ಸ್ಥಾನಮಾನದೊಂದಿಗೆ ಪ್ರಾರಂಭವಾಗಿರುತ್ತವೆ.

ಈ ಕಾಲೇಜುಗಳಲ್ಲಿ ಹಾಗೂ ಆಸ್ಪತ್ರೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಸಿಬ್ಬಂದಿಗಳ ಪೈಕಿ ಕೆಲವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಹಿಂದೆ ನೇಮಕಗೊಂಡು, ನಿಯೋಜನೆ ಮೇಲೆ ಈ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದರು. ಇದರೊಂದಿಗೆ ಈ ಸಂಸ್ಥೆಗಳಲ್ಲಿಯೇ ನೇಮಕಾತಿ ಹೊಂದಿ ಸೇವೆ ಸಲ್ಲಿಸುತ್ತಿದ್ದ ವೈದ್ಯಕೀಯ ಶಿಕ್ಷಣ ಸೇವಾಧಿಕಾರಿಗಳು ಮತ್ತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವಾ ಮತ್ತು ಕಾರ್ಮಿಕ ರಾಜ್ಯ ವಿಮಾ ಯೋಜನೆ (ವೈ) ಸೇವಾ ಅಧಿಕಾರಿಗಳಿಗೆ ನೀಡಬಹುದಾದ ವೇತನ, ಪಿಂಚಣಿ ಹಾಗೂ ಸೇವಾ ಸವಲತ್ತುಗಳನ್ನು ನೀಡುವ ಬಗ್ಗೆ, ಆರ್ಥಿಕ ಇಲಾಖೆಯ ಸಹಮತಿಯೊಂದಿಗೆ ಆದೇಶ ಸಂಖ್ಯೆ: ಆಕುಕ 277 ಎಂಎಂಸಿ 2008, ದಿನಾಂಕ: 21.09.2010 ಹೊರಡಿಸಲಾಗಿರುತ್ತದೆ.

ಈ ಆದೇಶ ಹೊರಡಿಸುವಲ್ಲಿ, ಮೊದಲಿಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ನೇಮಕಾತಿ ಹೊಂದಿ, ತದನಂತರ, ನಿಯೋಜನೆ ಆಧಾರದ ಮೇಲೆ ವೈದ್ಯಕೀಯ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಗಳು ತಮ್ಮ

ಐಯ್ಕೆಯನ್ನು ಚಲಾಯಿಸಿ, ತತ್ಸಂಬಂಧ ಕಾಲೇಜುಗಳಲ್ಲಿ ವಿಲೀನಾತಿಗೆ ಒಪ್ಪಿಗೆ ನೀಡಿದ ಸಿಬ್ಬಂದಿ ವರ್ಗದವರಿಗೆ ನೀಡಬಹುದಾದ ಪಿಂಚಣಿ ಸವಲತ್ತುಗಳನ್ನೊಳಗೊಂಡಂತೆ ಇತರೆ ಎಲ್ಲಾ ಸವಲತ್ತುಗಳನ್ನು ಕಾನೂನು ರೀತ್ಯ ನೀಡಲೇಬೇಕಾದ ಸವಲತ್ತುಗಳನ್ನು ಪರಿಗಣಿಸಿ, ಈ ಆದೇಶ ಹೊರಡಿಸಲಾಗಿರುತ್ತದೆ.

ಮುಂದುವರೆದು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಹಾಗೂ ತತ್ಸಂಬಂಧ ಕಾಲೇಜುಗಳಲ್ಲಿ ನೇರವಾಗಿ ನೇಮಕಾತಿ ಹೊಂದಿದ ಅಭ್ಯರ್ಥಿಗಳಿಗೆ ತತ್ಸಂಬಂಧ ನೇಮಕಾತಿ ಆದೇಶಗಳಲ್ಲಿ ಸೂಚಿಸಲಾದ ಸವಲತ್ತುಗಳನ್ನು ನೀಡುವುದು ಅನಿವಾರ್ಯವಾಗಿದ್ದು, ಅಂತೆಯೇ, ಇಂತಹ ಸಿಬ್ಬಂದಿಗಳಿಗೆ ನೀಡಬಹುದಾದ ಪಿಂಚಣಿ ಹಾಗೂ ನಿವೃತ್ತಿ ಉಪದಾನಗಳನ್ನು ಸಹ ನಿಗದಿಪಡಿಸಲಾಗಿರುತ್ತದೆ.

ವೈದ್ಯಕೀಯ ಕಾಲೇಜುಗಳಲ್ಲಿ 2006ನೇ ಸಾಲಿನ ಮುನ್ನ ದಿನಗಳಲ್ಲಿ ನೇಮಕಾತಿ ಹೊಂದಿದ ಸಿಬ್ಬಂದಿಗಳು ವೈದ್ಯಕೀಯ ಶಿಕ್ಷಣ ಇಲಾಖೆಯ ಸೇವಾ ನೌಕರರಾಗಿದ್ದು, ಈ ಸಿಬ್ಬಂದಿಗಳಿಗೆ ನೀಡಲಾದ ನೇಮಕಾತಿ ಆದೇಶದಲ್ಲಿ ನಿಗದಿಪಡಿಸಲಾದ ಷರತ್ತು ಮತ್ತು ನಿಬಂಧನೆಗಳನ್ನು ಹೊರತುಪಡಿಸಿ, ಇತರೆ ಸವಲತ್ತುಗಳನ್ನು ಕಾನೂನು ರೀತ್ಯ ನೀಡಲು ಬರುವುದಿಲ್ಲ. ಆದರೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಒಂದು ರಾಜ್ಯ ಸರ್ಕಾರದ ಕ್ಷೇತ್ರ ಇಲಾಖೆಯಾಗಿದ್ದು, ಈ ಇಲಾಖೆಯಲ್ಲಿ ನೇರವಾಗಿ ನೇಮಕಾತಿ ಹೊಂದಿದ ಅಭ್ಯರ್ಥಿಗಳು ರಾಜ್ಯ ಸರ್ಕಾರಿ ನೌಕರರಾಗಿದ್ದು, ಇವರಿಗೆ ಕೆ.ಸಿ.ಎಸ್ .ಆರ್ . ನಿಯಮಾವಳಿಗಳಂತೆ ವೇತನ ಶ್ರೇಣಿ, ಪಿಂಚಣಿ ಸೌಲಭ್ಯ ಮತ್ತು ಉಪದಾನಗಳನ್ನು ನೀಡಲಾಗುತ್ತಿದೆ.

ಮುಂದುವರೆದು, ಇಂತಹ ಅಭ್ಯರ್ಥಿಗಳು ತಮ್ಮ ಸೇವಾ ಸಮಯದಲ್ಲಿ ವೈದ್ಯಕೀಯ ಕಾಲೇಜುಗಳಲ್ಲಿ ನಿಯೋಜನೆ ಆಧಾರದ ಮೇಲೆ ಕಾರ್ಯನಿರ್ವಹಿಸಿ, ತಮ್ಮ ಐಯ್ಕೆಯನ್ನು ಚಲಾಯಿಸಿ, ಈ ಸಂಸ್ಥೆಗಳಲ್ಲಿ ವಿಲೀನಾತಿ ಹೊಂದಿದ ಪ್ರಕರಣದಲ್ಲಿ, ವಿಲೀನಾತಿ ದಿನಾಂಕದ ವರೆವಿಗೂ ಅಂತಹ ನೌಕರರು "ಸರ್ಕಾರಿ ನೌಕರರೆಂದು" ಪರಿಗಣಿಸಬೇಕಿದ್ದು, ಕಾನೂನು ರೀತ್ಯ ಇಂತಹ ಅಭ್ಯರ್ಥಿಗಳಿಗೆ ಇತರೆ ರಾಜ್ಯ ಸರ್ಕಾರಿ ನೌಕರರಿಗೆ ನೀಡಲಾಗುವ ಎಲ್ಲಾ ಸೇವಾ ಸವಲತ್ತುಗಳನ್ನು (ಪಿಂಚಣಿ ಸವಲತ್ತಿನೊಂದಿಗೆ) ನೀಡುವುದು ಅನಿವಾರ್ಯವಾಗುವುದು.

ಈ ಹಿನ್ನೆಲೆಯಲ್ಲಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನೇಮಕಾತಿ ಹೊಂದಿದ ದಿನಾಂಕದಿಂದ ಸ್ವಾಯತ್ತ ಸಂಸ್ಥೆಯಲ್ಲಿ ವಿಲೀನಾತಿಗೊಂಡ ದಿನಾಂಕದವರೆವಿಗೂ "ಪ್ರೋರೇಟಾ" ಆಧಾರದ ಮೇಲೆ ಪಿಂಚಣಿ ಸೌಲಭ್ಯ ನೀಡುವುದು ನಿಯಮಾನುಸಾರವಿರುತ್ತದೆ. ತದನಂತರದ, ಸೇವೆಗೆ ಸಂಬಂಧಿಸಿದಂತೆ, ತತ್ಸಂಬಂಧ ಸಂಸ್ಥೆಗಳು ಸ್ವಾಯತ್ತ ಸಂಸ್ಥೆಗಳಾಗಿದ್ದು, ಈ ಸಂಸ್ಥೆಗಳ ಬೈಲಾಗಳಲ್ಲಿ ನಮೂದಿಸಿರುವಂತೆ ಸೇವಾ ಷರತ್ತು ಮತ್ತು ಸವಲತ್ತುಗಳಂತೆ ಇವರ ಸೇವೆಯನ್ನು ಪರಿಗಣಿಸಬೇಕಾಗಿದ್ದು, ಈ ಸಂಸ್ಥೆಗಳಲ್ಲಿ ಎನ್ .ಪಿ.ಎಸ್ . ಸವಲತ್ತು ಲಭ್ಯವಿದ್ದ ಹಿನ್ನೆಲೆಯಲ್ಲಿ ಪ್ರೋರೇಟಾ ಆಧಾರದಲ್ಲಿ ಪಿಂಚಣಿಯೊಂದಿಗೆ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ನೇಮಕಾತಿ ಹೊಂದಿ ಸ್ವಾಯತ್ತ ಸಂಸ್ಥೆಗಳಲ್ಲಿ ವಿಲೀನಾತಿ ಹೊಂದಿದ ದಿನಾಂಕದವರೆವಿಗೂ) ಅರ್ಹದಾಯಕ ಎನ್ .ಪಿ.ಎಸ್ . ಸವಲತ್ತು ಸಹ ನೀಡಲಾಗುತ್ತಿದ್ದು, ಈ ನಿಟ್ಟಿನಲ್ಲಿ ಹೊರಡಿಸಲಾದ ಸರ್ಕಾರದ ಆದೇಶ ನಿಯಮಾನುಸಾರವಿದ್ದು, ಆರ್ಥಿಕ ಇಲಾಖೆಯ ಸಹಮತಿ ಪಡೆದು, ಸಕ್ಷಮ ಪ್ರಾಧಿಕಾರದ ಅನುಮೋದನೆಯೊಂದಿಗೆ ಹೊರಡಿಸಲಾಗಿರುವ ಆದೇಶವಾಗಿರುತ್ತದೆ.

**ಸಂಖ್ಯೆ:** ಎಂಇಡಿ 83 ಎಂಎಂಸಿ 2024

(ಡಾ|| ಶರಣಪ್ರಕಾಶ ಆರ್ . ಪಾಟೀಲ)
ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ,
ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು